**O.S. 369-19** **DW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 04.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ S S S, ವಕೀಲರಿಂದಃ**

3. ವಾದಿ ಸದರಿ ದಾವೆಯನ್ನು ಪಾಲು ಬೇಕೆಂದು ಸಲ್ಲಿಸಿದ್ದಾರೆ. ಮತ್ತೆ ಬೇರೇನೂ ಪರಿಹಾರ ಕೇಳಿಲ್ಲ. ವಾದಿ ಗಂಡನ ಅಕ್ಕ. ಪ್ರತಿವಾದಿಯಾಗಿ ನಾನು ಹಾಗೂ ನಮ್ಮ ನಾದಿನಿ ಶೋಭಾ ಹಾಗೂ ಸವಿತಾ ಇದ್ದೇವೆ. ಸೋಮಪ್ಪ ಹಾಗೂ ದೇವಿಕಾ ರವರಿಗೆ 5 ಜನ ಮಕ್ಕಳಿದ್ದು. ಅವರ ಹೆಸರು ಮಂಜುಳಾ ಕುಂದಗೋಳ, ಗೀತಾ ಕುಂದಗೋಳ, ಶೋಭಾ ಕರ್ಕಿ, ಸಿದ್ದಾರ್ಥ ಇಟಗಿ ಹಾಗೂ ಸವಿತಾ ಪಾಟೀಲ. ಸೋಮಪ್ಪ ರವರು ಏರಪೋರ್ಸ್ ದಲ್ಲಿ ಕೆಲಸ ಮಾಡುತ್ತಿದ್ದರು. ಅವರು ಸ್ವಯಂ ನಿವೃತ್ತಿ ಹೊಂದಿದ್ದರು. ಸೋಮಪ್ಪ ರವರಿಗೆ ನಿವೃತ್ತಿಗೊಂಡ ನಂತರ ಪಿಂಚಣಿ ಎಷ್ಟು ಇತ್ತು ಅಂತಾ ಗೊತ್ತಿಲ್ಲ. ಸೋಮಪ್ಪ ರವರು 1976 ರಲ್ಲಿ ನಿವೃತ್ತಿಗೊಂಡಾಗ ಅವರಿಗೆ ಪ್ರಾರಂಭದಲ್ಲಿ ಪಿಂಚಣಿ ಹಣ 390/- ಇತ್ತು ಅಂದರೆ ಸರಿ. ನಾನು ಬಿ ಕಾಂ ವರೆಗೆ ವ್ಯಾಸಂಗ ಮಾಡಿದ್ದೇನೆ. ನನ್ನ ಹಾಗೂ ಸಿದ್ದಾರ್ಥ ರವರ ಮದುವೆ 2006 ರಲ್ಲಿ ಆಗಿದೆ. ಸಿದ್ದಾರ್ಥ ರವರು ಹೆಚ್ ಸಿ ಸಿ ಕಂಪನಿಯಲ್ಲಿ ಮುಂಬೈಯಲ್ಲಿ ಕೆಲಸ ಮಾಡುತ್ತಿದ್ದರು. 8 – 10 ವರ್ಷ ಮುಂಬೈಯಲ್ಲಿದ್ದು, ನಂತರ ಬೆಂಗಳೂರಿನಲ್ಲಿ 4 ವರ್ಷ ಕೆಲಸ ಮಾಡಿರುತ್ತಾರೆ. ನನ್ನ ಗಂಡ ಚೆನ್ನೈ ಗೆ ಹೋದ ನಂತರ ನಾನು, ಅತ್ತೆ ಮಾವ ರವರ ಜೊತೆಗೆ ಹುಬ್ಬಳ್ಳಿಯಲ್ಲಿದ್ದೆನು. ಆಸ್ತಿಗಳೆಲ್ಲಾ ಹುಬ್ಬಳ್ಳಿಯ ಈಶ್ವರನಗರದಲ್ಲಿವೆ ಅಂದರೆ ಸರಿ. ಸವಿತಾ ಪಾಟೀಲ ಮದುವೆ 2001 ರಲ್ಲಿ ಆಗಿದೆ, ಉಳಿದವರ ಮದುವೆ ನನ್ನ ಮದುವೆಗಿಂತ ಮುಂಚೆ ಆಗಿದೆ. ಸೋಮಪ್ಪ ರ ಒಬ್ಬ ಮಗಳು ಈಶ್ವರನಗರದಲ್ಲಿ ನಮ್ಮ ಬಳಿ ಇದ್ದಾರೆ ಅಂದರೆ ಸರಿ. ಇನ್ನೊಬ್ಬರು ಧಾರವಾಡದಲ್ಲಿದ್ದಾರೆ ಅಂದರೆ ಸರಿ. ಒಬ್ಬರು ಮುಂಬೈ ಹಾಗೂ ಇನ್ನೊಬ್ಬರು ಗೋವಾದಲ್ಲಿದ್ದಾರೆ ಅಂದರೆ ಸರಿ. ಸಿದ್ದಾರ್ಥ ರವರು ಹುಬ್ಬಳ್ಳಿಯಲ್ಲಿ ಹೊಲ - ಮನೆ ಹಾಗೂ ಮನೆ ಭಾಡಿಗೆಗಳನ್ನು ನೋಡಿಕೊಂಡು ಹೋಗುತ್ತಿದ್ದರು. 2 ಅಂಗಡಿಗಳಿವೆ 4 – 5 ಮನೆಗಳಿವೆ. 4 – 5 ಮನೆಗಳನ್ನು ಭಾಡಿಗೆ ಕೊಟ್ಟಿದ್ದೇವೆ. 40 – 50 ಸಾವಿರ ರೂ. ಭಾಡಿಗೆ ಬರುತ್ತದೆ ಅಂದರೆ ಸರಿಯಲ್ಲ. 1 ಅಂಗಡಿಗೆ 15 ಸಾವಿರ ರೂ. ಭಾಡಿಗೆ ಬರುತ್ತದೆ ಅಂದರೆ ಸರಿಯಲ್ಲ. ಸೋಮಪ್ಪ ರವರು ನಿವೃತ್ತಿಗೊಂಡ ನಂತರ ಮನೆತನದ ಆಗು-ಹೋಗುಗಳನ್ನು ಅವರೆ ನೋಡಿಕೊಂಡು ಹೋಗುತ್ತಿದ್ದರು ಅಂದರೆ ಸರಿ. ಸೋಮಪ್ಪ ರವರು 1 ಹಾಗೂ 2 ನೇ ಹೆಣ್ಣು ಮಕ್ಕಳ ಮದುವೆಯನ್ನು ಬಾಲ್ಯ ವಿವಾಹ ಮಾಡಿದ್ದಾರೆ ಅಂದರೆ ಸರಿ.

**O.S. 369-19** **DW-1**

**ಪಾಟಿ ಸವಾಲಿಗೆ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.